(ಸಾಕ್ಷಿಯನ್ನು ದಿಃ 2-8-2017 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.)

**ಪಾಟೀ ಸವಾಲು : ವಾದಿ ಪರ : ಶ್ರೀ ಆರ್ ವಿ ಬಿ ವಕೀಲರಿಂದ**

ಈ ಕೇಸಿನ ಪ್ರತಿವಾದಿ ಶ್ರೀಕಾಂತ ಶಾಂತಾರಾಮ ವಾಗಳೆ ನನ್ನ ತಂದೆ ಇದ್ದಾರೆ. ನನ್ನ ತಂದೆಯವರು ಮುಂಬೈನಲ್ಲಿ ವಾಸ ಇದ್ದಾರೆ. ನನ್ನ ತಂದೆಯವರು ಮೂಲತಃ ಕಾರವಾರದವರು ಎಂದರೆ ಸರಿ. ನನ್ನ ತಂದೆಯವರು ಕಾರವಾರದಲ್ಲಿ ಜಮೀನುಗಳನ್ನು ಹೊಂದಿದ್ದಾರೆ. ಸದ್ರಿ ಜಮೀನುಗಳು ಪ್ರಸ್ತುತ ದಾವಾ ಸ್ವತ್ತುಗಳು ಆಗಿರುತ್ತವೆ ಎಂದರೆ ಸರಿ. ಆರ್ ಟಿ ಸಿ ಪಹಣಿಯಲ್ಲಿ ದಾವಾ ಸ್ವತ್ತುಗಳ ಕುರಿತಂತೆ ನನ್ನ ತಂದೆಯವರ ಹೆಸರಿನಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಸದ್ರಿ ದಾವಾ ಸ್ವತ್ತುಗಳ ಪಹಣಿಯಲ್ಲಿ ನನ್ನ ತಂದೆಯವರ ಹೆಸರು ಮಾತ್ರ ನಮೂದು ಇದ್ದು, ಕುಟುಂಬದ ಮ್ಯಾನೇಜರ ಎಂಬುದಾಗಿ ಎಲ್ಲಿಯೂ ನಮೂದು ಇರುವುದಿಲ್ಲ ಎಂದರೆ ಸರಿ. ರೆವಿನ್ಯೂ ದಾಖಲೆಗಳಲ್ಲಿ ನನ್ನ ತಂದೆಯವರ ಹೆಸರು ಮಾತ್ರ ನಮೂದು ಇದ್ದು ನನ್ನ ಮತ್ತು ನನ್ನ ಸಹೋದರಿಯ ಹೆಸರು ನಮೂದು ಇರುವುದಿಲ್ಲ ಎಂಬುದಾಗಿ ಪ್ರಶ್ನಿಸಿ ಯಾವುದೇ ಕೇಸು ಅಥವಾ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಕಾರವಾರದಲ್ಲಿ ನನ್ನ ತಂದೆಯವರ ಹೆಸರಿಗೆ ದಾವಾ ಸ್ವತ್ತುಗಳು ಇರುವುದರಿಂದ ಅವರು ವರ್ಷದಲ್ಲಿ 3 - 4 ಬಾರಿ ಅಥವಾ ಆಗಾಗ ಕಾರವಾರಕ್ಕೆ ಬಂದು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯವರು ಈ ದಾವಾ ದಾಖಲು ಮಾಡುವ ಕಾಲಕ್ಕೆ ಸಹಿ ಮಾಡುವ ಸಲುವಾಗಿ ಮಾತ್ರ ಕಾರವಾರಕ್ಕೆ ಬಂದಿದ್ದು ಅದಕ್ಕೆ ಮುಂಚೆ ಅವರು ಯಾವಾಗಲೂ ಸಹ ಕಾರವಾರಕ್ಕೆ ಬಂದಿರಲಿಲ್ಲ. ನನ್ನ ತಾಯಿಯವರು ಕಾರವಾರಕ್ಕೆ ನನ್ನ ತಂದೆಯವರ ಹೆಸರಿನಲ್ಲಿರುವ ಸ್ವತ್ತುಗಳನ್ನು ನೋಡಿಕೊಂಡು ಹೋಗಲು ಬರುತ್ತಾ ಇದ್ದರು. ನನ್ನ ತಂದೆ ಪ್ರತಿವಾದಿ ಶ್ರೀಕಾಂತ ಎಸ್ ವಾಗಳೆ ಎಂಬುದಾಗಿ ಇಂಗ್ಲೀಷನಲ್ಲಿ ಸಹಿ ಮಾಡುತ್ತಾರೆ. ಸಾಕ್ಷಿಯು ಮುಂದುವರಿದು ಹೇಳುತ್ತಾರೆ ಎಸ್ ವಾಗಳೆ ಎಂಬುದಾಗಿ ಮಾತ್ರ ನನ್ನ ತಂದೆಯವರು ಸಹಿ ಮಾಡುತ್ತಾರೆ ಎಂದು. ನನ್ನ ತಂದೆಯವರ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ನನಗೆ ಈಗ ತೋರಿಸುತ್ತಿರುವ ನಿ.ಪಿ.6 – ರಶೀದಿಯಲ್ಲಿ ಇರುವ ಸಹಿ ನನ್ನ ತಂದೆ ಪ್ರತಿವಾದಿಯ ಸಹಿ ಆಗಿರುತ್ತದೆ.

ನಾನು ಈ ದಾವೆಯಲ್ಲಿ ನನ್ನ ತಂದೆ ಪ್ರತಿವಾದಿಯ ಪರವಾಗಿ ಜಿ.ಪಿ.ಎ. ಹೋಲ್ಡರ ಆಗಿ ಸಾಕ್ಷ್ಯ ನುಡಿಯುತ್ತಿದ್ದೇನೆ. ನನ್ನ ಹೆಸರಿಗೆ ಬರೆದುಕೊಟ್ಟಿರುವ ಸದ್ರಿ ಸಾಮಾನ್ಯ ಅಧಿಕಾರ ಪತ್ರಕ್ಕೆ ನನ್ನ ತಂದೆಯವರೇ ಸಹಿ ಮಾಡಿದ್ದಾರೆ. ನಾನು ಕೋರ್ಟಿಗೆ ಹಾಜರಪಡಿಸಿರುವ ನಿ.ಡಿ.1 – ಜಿ ಪಿ ಎ ನಲ್ಲಿ ಇರುವ ಸಹಿ ನನ್ನ ತಂದೆ - ಪ್ರತಿವಾದಿಯ ಸಹಿ ಆಗಿರುತ್ತದೆ. ಸದ್ರಿ ನಿ.ಡಿ.1 ರಲ್ಲಿ ನನ್ನ ತಂದೆಯವರು ಶ್ರೀಕಾಂತ ಎಸ್ ವಾಗಳೆ ಎಂಬುದಾಗಿ ಸಹಿ ಮಾಡಿದ್ದಾರೆ ಎಂದರೆ ಸರಿ. ನನ್ನ ತಂದೆಯವರು ನ್ಯಾಯಾಲಯಕ್ಕೆ ಸಲ್ಲಿಸಿರುವ ವಕಾಲತ್ ನಾಮದಲ್ಲಿ ತನ್ನ ಸಹಿಯನ್ನು ಶ್ರೀಕಾಂತ ಎಸ್ ವಾಗಳೆ ಎಂಬುದಾಗಿ ಮಾಡಿದ್ದಾರೆ ಎಂದರೆ ಸರಿ. ನಿ.ಪಿ.6, ನಿ.ಡಿ.1 ಮತ್ತು ನನ್ನ ತಂದೆಯವರ ವಕಾಲತ್ ನಾಮಾದಲ್ಲಿರುವ ಸಹಿಗಳು ನನ್ನ ತಂದೆ- ಪ್ರತಿವಾದಿಯ ಸಹಿಗಳು ಆಗಿರುತ್ತವೆ.

ನನ್ನ ತಂದೆ - ಪ್ರತಿವಾದಿಯು ವಾದಿಗೆ ರೂ. 50,000-00 ಗಳನ್ನು ಚೆಕ್ ಮೂಲಕ ಕೊಟ್ಟಿದ್ದಾರೆ. ನನ್ನ ತಂದೆಯವರ ಬ್ಯಾಂಕ್ ಖಾತೆಗೆ ಸಂಬಂಧಪಟ್ಟ ಚೆಕ್ ಮೂಲಕ ಸದ್ರಿ ಹಣ ಪಾವತಿ ಮಾಡಿದ್ದಾರೆ. ಸದ್ರಿ ಚೆಕ್ಕು ನಗದೀಕರಣ ಆಗದೇ ವಾಪಸ್ಸು ಬಂದಿರುತ್ತದೆ. ನಾನು ಈಗ ನೋಡುತ್ತಿರುವ ನಿ.ಪಿ.5 –

ದಾಖಲೆಯು ನಾವು ವಾದಿಗೆ ಕಳುಹಿಸಿದ ಇ-ಮೇಲ್ ಪತ್ರ ಆಗಿರುತ್ತದೆ. ನಾನು ಈಗ ನೋಡುತ್ತಿರುವ ನಿ.ಪಿ.10- ಪತ್ರವು ವಾದಿಯು ನನ್ನ ತಂದೆ- ಪ್ರತಿವಾದಿಗೆ ಕಳುಹಿಸಿರುವ ಪತ್ರ ಆಗಿರುತ್ತದೆ ಎಂದರೆ ಸರಿ. ನನ್ನ ತಂದೆ ಪ್ರತಿವಾದಿಯು ವಾದಿಗೆ ಸದ್ರಿ ರೂ. 50,000-00 ಗಳನ್ನು ವಾಪಸ್ಸು ನೀಡಲು ಕಾರಣವೆಂದರೆ ಪ್ರತಿವಾದಿಯು ವಾದಿಯಿಂದ ಸದ್ರಿ ಹಣವನ್ನು ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಾನು ಹಾಜರಿರಲಿಲ್ಲ ಮತ್ತು ಆ ರೀತಿ ಯಾವುದೇ ವ್ಯವಹಾರ ನಡೆದಿಲ್ಲ ಎನ್ನುತ್ತಾರೆ. ನನ್ನ ತಂದೆಯವರು ವಾದಿಯಿಂದ ರೂ. 50,000-00 ನ್ನು ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು ಸದ್ರಿ ವ್ಯವಹಾರಕ್ಕೆ ನಾನು ಪಕ್ಷಗಾರನಲ್ಲದೇ ಇದ್ದುದರಿಂದ ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದ್ರಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಸಾಕ್ಷ್ಯ ನುಡಿಯಲು ನನ್ನ ತಂದೆ ಪ್ರತಿವಾದಿಯು ಸಕ್ಷಮ ವ್ಯಕ್ತಿ ಇದ್ದಾರೆ ಎಂದರೆ ಸರಿ. ನನ್ನ ತಂದೆಯವರು ಈಗಲೂ ಸಹ ಮುಂಬೈನಲ್ಲಿ ವೈದ್ಯ ವೃತ್ತಿ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ಈಗಲೂ ಸಹ ನನ್ನ ತಂದೆಯವರು ವರ್ಷಕ್ಕೆ 1 ಅಥವಾ 2 ಬಾರಿ ಕಾರವಾರಕ್ಕೆ ಬಂದು ಹೋಗುತ್ತಾರೆ ಎಂದರೆ ಸರಿಯಲ್ಲ.

ಲಿಖಿತ ಹೇಳಿಕೆ ಸಲ್ಲಿಸುವ ಕಾಲಕ್ಕೆ ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನನ ತಂದೆಯವರು ಮೊಬೈಲ್ ಅಥವಾ ಟೆಲಿಫೋನ್ ಮೂಲಕ ಈಗಲೂ ಸಹ ಮಾತುಕತೆ ಮತ್ತು ಸಂಭಾಷಣೆ ನಡೆಸುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ವಾದಿಯು ಸ್ನೇಹಿತರಾಗಿದ್ದು ಆ ರೀತಿ ಎಷ್ಟು ವರ್ಷಗಳಿಂದ ಸ್ನೇಹಿತರಾಗಿದ್ದಾರೆ ಅಂತ ನನಗೆ ಗೊತ್ತಿಲ್ಲ. ವಾದಿಗೆ ನನ್ನ ತಂದೆ ಪ್ರತಿವಾದಿಯರು ಯಾರು ಪರಿಚಯ ಮಾಡಿಕೊಟ್ಟಿದ್ದರು ಅಂತ ನನಗೆ ಗೊತ್ತಿಲ್ಲ. ಅದೇ ರೀತಿ ಯಾವ ವರ್ಷದಲ್ಲಿ ಆ ರೀತಿ ಪರಿಚಯ ಮಾಡಿಕೊಟ್ಟಿದ್ದಾರೆ ಅಂತ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ವಾದಿಯ ನಡುವೆ ಏನು ವ್ಯವಹಾರಗಳು ನಡೆದಿರುತ್ತವೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಆ ಕಾರಣದಿಂದ ನನಗೆ ಈಗ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು ಆಗುವುದಿಲ್ಲ.

ಈ ಕೇಸಿನ ವಾದಿ ದಾವಾ ಆಸ್ತಿಗಳನ್ನು ರೂ. 31,00,000-00 ಗಳಿಗೆ ಖರೀದಿ ಮಾಡಲು ಒಪ್ಪಿದ್ದರು ಎಂದರೆ ಸರಿ. ಸದ್ರಿ ರೂ. 31,00,000-00 ಗಳ ಪೈಕಿ ರೂ. 50,000-00 ಗಳನ್ನು ವಾದಿಯು ನನ್ನ ತಂದೆಯವರಿಗೆ ಮುಂಗಡ ರೂಪದಲ್ಲಿ ಪಾವತಿ ಮಾಡಿದ್ದರು ಎಂದರೆ ಸರಿಯಲ್ಲ. ಸದ್ರಿ ರೂ. 50,000-00 ಹಣವನ್ನು ನನ್ನ ತಂದೆಯವರಿಗೆ ವಾದಿಯು ಸದಾಶಿವಗಡದಲ್ಲಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಹಾಜರು ಇರಲಿಲ್ಲ. ಕೃಷ್ಣಾನಂದ ಪುರುಷೋತ್ತಮ ನಾಯ್ಕರವರ ಪರಿಚಯ ಇದೆಯಾ ಎಂದರೆ ಸಾಕ್ಷಿಯು ಆತ ವಾದಿಯ ಚಿಕ್ಕಪ್ಪ ಇದ್ದಾರೆ ಎನ್ನುತ್ತಾರೆ. ಸದ್ರಿ ಕೃಷ್ಣಾನಂದ ಪುರುಷೋತ್ತಮ ನಾಯ್ಕ ರವರು ವಾದಿಯು ಸದ್ರಿ ರೂ. 50,000-00 ಗಳನ್ನು ನನ್ನ ತಂದೆಯವರಿಗೆ ನೀಡುವ ಕಾಲಕ್ಕೆ ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲ.

**(ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು. )**

(ತೆರೆದ ನ್ಯಾ.ದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು, ಕಾರವಾರ.